1	2	3	4
21.	ಶಿವಮೊಗ್ಗ	1467	926.65
22.	ಬಿಜಾಪುರ	-	-
23.	ಬೆಳಗಾಂ	340	282.43
24.	ಬಾಗಲಕೊಟೆ	-	-
25.	ಹಾಸನ	20	20.36
26.	ತುಮಕೂರು	-	-
27.	ಉತ್ತರ ಕನ್ನಡ	2443	1234.837
	ಒಟ್ಟು	**4906**	**2875.138**

ರಾಜ್ಯದಲ್ಲಿರುವ ಅರಣ್ಯ ಪ್ರದೇಶ

1225(1434) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಈಗಿರುವ ಅರಣ್ಯ ಪ್ರದೇಶದಲ್ಲಿ ಎಷ್ಟು ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ(ಜಿಲ್ಲಾವಾರು ವಿವರ ನೀಡುವುದು);

ಇ) ಒತ್ತುವರಿ ಮಾಡಿಕೊಂಡಿರುವ ಅರಣ್ಯ ಜಮೀನನ್ನು ಸಕ್ರಮೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಸಕ್ರಮೀಕರಣಗೊಳಿಸಲು ಅನುಸರಿಸುತ್ತಿರುವ ಮಾನದಂಡವೇನು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 3828430 ಹೆ. ಅರಣ್ಯ ಪ್ರದೇಶವಿದೆ. ಅನುಬಂಧ-1ರಲ್ಲಿ ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ.

ಆ) ಒಟ್ಟು 117556 ಹೆ. ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಅನುಬಂಧ-2ರಲ್ಲಿ ಜಿಲ್ಲಾವಾರು ವಿವರದ ಪಟ್ಟಿ ಲಗತ್ತಿಸಿದೆ.

ಇ) ಕೇಂದ್ರ ಸರ್ಕಾರದ ಪತ್ರ ದಿನಾಂಕ:18-9-90 ರಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ಜಾರಿಗೆ ಬರುವ ಮುನ್ನಾ ರಾಜ್ಯ ಸರ್ಕಾರಗಳು ಅರಣ್ಯ ಭೂಮಿಯಲ್ಲಾದ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ನಿರ್ಣಯ ತೆಗೆದುಕೊಂಡಿದ್ದಲ್ಲಿ ಆ ಪ್ರಕರಣಗಳನ್ನು ಅರಣ್ಯ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲು ತಿಳಿಸಲಾಗಿತ್ತು. ಈ ಬಗ್ಗೆ ರಾಜ್ಯ ಸರ್ಕಾರವು ಅರಣ್ಯ ಸಂರಕ್ಷಣಾ ಕಾಯ್ದೆ 1980 ಜಾರಿಗೆ ಬರುವ ಮುನ್ನಾ ಆದ ಒಟ್ಟು17007 ಹೆ. ಅರಣ್ಯ ಪ್ರದೇಶವನ್ನು ಒಳಗೊಂಡಂತೆ 21569 ಕುಟುಂಬಗಳನ್ನು ಸಕ್ರಮಗೊಳಿಸಲು ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಈ ಪೈಕಿ ಕೇಂದ್ರ ಸರ್ಕಾರವು ತನ್ನ ಪತ್ರ ದಿನಾಂಕ: 15-5-1996ರಲ್ಲಿ 19348 ಕುಟುಂಬಗಳಲ್ಲಿ 14848 ಹೆ. ಪ್ರದೇಶವನ್ನು ಹಲವು ಷರತ್ತುಗಳೊಡನೆ ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ. ಅದರಂತೆ ರಾಜ್ಯ ಸರ್ಕಾರವು ತನ್ನ ಆದೇಶ ದಿನಾಂಕ: 5-5-1997ರಲ್ಲಿ ಅರ್ಹ ಪ್ರಕರಣಗಳನ್ನು ಹಲವು ಷರತ್ತುಗಳೊಡನೆ ಸಕ್ರಮಗೊಳಿಸಿ

ಪಟ್ಟಾ ನೀಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತದೆ. ಇದುವರೆಗೂ ಒಟ್ಟು 2875 ಹೆ. ಪ್ರದೇಶಗಳನ್ನು ಜಿಲ್ಲಾಧಿಕಾರಿಗಳು ಸಕ್ರಮಗೊಳಿಸಿರುತ್ತಾರೆ. ಉಳಿದ ಪ್ರದೇಶಗಳನ್ನು ಸಕ್ರಮಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. ಸದ್ಯದಲ್ಲಿಯೇ ಮುಕ್ತಾಯಗೊಳ್ಳುವ ಹಂತದಲ್ಲಿದೆ.

ಈ) ದಿನಾಂಕ: 27-4-78ರ ಪೂರ್ವದಲ್ಲಿ ಆದ ಅರಣ್ಯ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಹೊರಡಿಸಿದ ದಿನಾಂಕ: 5-5-97ರ ಸರ್ಕಾರಿ ಆದೇಶದಂತೆ ಮುಖ್ಯ ಮಾನದಂಡಗಳು ಈ ಕೆಳಗಿನಂತಿದೆ.

1. ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಮತ್ತು ಭೂ ರಹಿತ ಕೃಷಿಕರಿಗೆ ಹಾಗೂ ಅತಿ ಕಡಿಮೆ ಭೂಮಿ ಇರುವವರಿಗೆ ಸಕ್ರಮಗೊಳಿಸಲಾಗುತ್ತಿದೆ.

2. ಭೂ ರಹಿತ, ಸಣ್ಣ ರೈತ ಕುಟುಂಬದವರ ಯಾರದೇ ಹೆಸರಿನಲ್ಲಿ ಕೃಷಿ ಭೂಮಿ ಇರಕೂಡದು ಹಾಗೂ ವರ್ಷದ ಆದಾಯ ರೂ. 8000-00 ಮೀರಬಾರದು.

3. ಪ್ರತಿ ವ್ಯಕ್ತಿಗೆ 3 ಎಕರೆಗಿಂತ ಹೆಚ್ಚು ಭೂಮಿಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಅನುಬಂಧ-1

ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾವಾರು ಅರಣ್ಯ ಪ್ರದೇಶ

(ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ಅರಣ್ಯ ಪ್ರದೇಶ
1	2	3
1.	ಬೆಂಗಳೂರು (ನಗರ)	7364
2.	ಬೆಂಗಳೂರು (ಗ್ರಾಮಾಂತರ)	109438
3.	ಕೋಲಾರ	103941
4.	ಗದಗ	32449
5.	ಹಾವೇರಿ	41202
6.	ಧಾರವಾಡ	70022
7.	ಮಂಡ್ಯ	27181
8.	ಮೈಸೂರು	153852
9.	ಚಾಮರಾಜನಗರ	259110
10.	ರಾಯಚೂರು	32554
11.	ಗುಲ್ಬರ್ಗಾ	113785
12.	ಬೀದರ್	48231
13.	ದಾವಣಗೆರೆ	48858
14.	ಚಿತ್ರದುರ್ಗ	107371
15.	ಬಳ್ಳಾರಿ	174353
16.	ಕೊಪ್ಪಳ	32523

1	2	3
17.	ಕೊಡಗು	125952
18.	ಉಡುಪಿ	150590
19.	ದಕ್ಷಿಣ ಕನ್ನಡ	367640
20.	ಚಿಕ್ಕಮಗಳೂರು	217908
21.	ಶಿವಮೊಗ್ಗ	327016
22.	ಬಿಜಾಪುರ	1722
23.	ಬೆಳಗಾಂ	224557
24.	ಬಾಗಲಕೋಟೆ	81036
25.	ಹಾಸನ	54107
26.	ತುಮಕೂರು	86517
27.	ಉತ್ತರ ಕನ್ನಡ	829151
	ಒಟ್ಟು	**3828430**

ಅನುಬಂಧ-2

ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಅತಿಕ್ರಮಣದ ವಿವರ ವಿಸ್ತೀರ್ಣ (ಹೆ.ಗಳಲ್ಲಿ)
1	2	3
1.	ಬೆಂಗಳೂರು (ನಗರ)	331.770
2.	ಬೆಂಗಳೂರು (ಗ್ರಾಮಾಂತರ)	5814.650
3.	ಕೋಲಾರ	2520.210
4.	ಗದಗ	2855.070
5.	ಹಾವೇರಿ	360.424
6.	ಧಾರವಾಡ	1158.242
7.	ಮಂಡ್ಯ	24.410
8.	ಮೈಸೂರು	1214.330
9.	ಚಾಮರಾಜನಗರ	447.270
10.	ರಾಯಚೂರು	1694.140
11.	ಗುಲ್ಬರ್ಗಾ	6562.000
12.	ಬೀದರ್	2591.038
13.	ದಾವಣಗೆರೆ	1395.560
14.	ಚಿತ್ರದುರ್ಗ	903.800

1	2	3
15.	ಬಳ್ಳಾರಿ	4537.230
16.	ಕೊಪ್ಪಳ	1447.780
17.	ಕೊಡಗು	3373.729
18.	ಉಡುಪಿ	1181.740
19.	ದಕ್ಷಿಣ ಕನ್ನಡ	1585.036
20.	ಚಿಕ್ಕಮಗಳೂರು	14435.680
21.	ಶಿವಮೊಗ್ಗ	28012.480
22.	ಬಿಜಾಪುರ	48.580
23.	ಬೆಳಗಾಂ	128998,130
24.	ಬಾಗಲಕೋಟೆ	1057,490
25.	ಹಾಸನ	1333.040
26.	ತುಮಕೂರು	2833.584
27.	ಉತ್ತರ ಕನ್ನಡ	16938.685
	ಒಟ್ಟು	**117556.098**

ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಗೆ ನಬಾರ್ಡ್ ಯೋಜನೆಯಲ್ಲಿ ಬಿಡುಗಡೆಯಾದ ಹಣ

1226(1435) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರುವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿಗಾಗಿ ನಬಾರ್ಡ್ ಹಾಗೂ ವಿವಿಧ ಸಂಸ್ಥೆಗಳಿಂದ ಎಷ್ಟು ಹಣವನ್ನು ಸಾಲವಾಗಿ ತೆಗೆದುಕೊಳ್ಳಲಾಗಿದೆ?

ಆ) ಆ ಹಣದಲ್ಲಿ ಯಾವ ಯಾವ ರಸ್ತೆಗಳನ್ನು ದುರಸ್ತಿಗೊಳಿಸಲಾಗಿದೆ? (ರಸ್ತೆವಾರು ವಿವರ ನೀಡುವುದು)

ಇ) ಈ ಸಾಲವನ್ನು ಯಾವ ಷರತ್ತಿನ ಮೇಲೆ ಪಡೆಯಲಾಗಿದೆ ಹಾಗೂ ಎಷ್ಟು ಹಣವನ್ನು ಮರುಪಾವತಿ ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ನಬಾರ್ಡ್ ಯೋಜನೆಯಡಿ ರಸ್ತೆಗಳ ದುರಸ್ತಿ ಕೈಗೊಂಡಿರುವುದಿಲ್ಲ. ರಾಜ್ಯದಲ್ಲಿನ 7300 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ 3 ವರ್ಷಗಳ ನಿರ್ವಹಣೆಗೆ ಹುಡ್ಕೋ ಸಂಸ್ಥೆಯಿಂದ ಈವರೆಗೆ 150 ಕೋಟಿ ರೂ.ಗಳ ಸಾಲ ಪಡೆಯಲಾಗಿದೆ.

ಆ) ಮೇಲೆ ತಿಳಿಸಿರುವಂತೆ 7300 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ಕೈಗೊಳ್ಳಲಾಗಿದೆ. ಜಿಲ್ಲಾವಾರು, ರಸ್ತೆವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ) ಈ ಸಾಲಕ್ಕೆ ಶೇ. 10.75ರಂತೆ ಬಡ್ಡಿ ನೀಡಬೇಕಿದ್ದು, ಸಾಲವನ್ನು 15 ವರ್ಷಗಳಲ್ಲಿ ಮರು ಪಾವತಿಸಬೇಕಿದೆ. ಈವರೆಗೆ 17.85 ಕೋಟಿ ರೂಗಳನ್ನು ಮರುಪಾವತಿಸಲಾಗಿದೆ.